(i) Installation of 110 KV. 10 MVA Sub-station at Chikkodi.

(ii) Installation of 5 MVA 33 KV. MUSS at Nippani.

(iii) To augment the Station capacity by addition of 5 MV. transformer at Sadalga MUSS.

ಶ್ರೀ ಎ. ಬಿ. ಬೆಡಗಿ.—ಸ್ವಾಮಿ, ನನ್ನ (ಆ) ಪ್ರಶ್ನೆಗೆ ಉತ್ತರವಾಗಿ

"ವಿದ್ಯುಚ್ಛಕ್ತಿಯ ಸಾಮರ್ಥ್ಯದ ಪರಮಾವಧಿಯಲ್ಲಿ ಕೊರತೆ ಉಂಟಾಗಿದ್ದು ರಾಜ್ಯಾದ್ಯಂತ ವಿದ್ಯುತ್ ಪ್ರಸಾರವನ್ನು ಕಡಿಮೆಗೊಳಿಸುವುದರಿಂದ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಅಡಚಣೆಯುಂಟಾಗಿದೆ, ಪ್ರತಿಯೊಂದು ಮಾರ್ಗದಲ್ಲೂ ವಾರಕ್ಕೆ ಒಂದು ಬಾರಿ ಅಡಚಣೆಯುಂಟಾಗಿದೆ".

ಎಂದು ಹೇಳಿದ್ದೀರಿ. ಆದರೆ ವಾರದಲ್ಲಿ ೪–೫ ದಿವಸ ವಿದ್ಯುಚ್ಛಕ್ತಿ ಕೊರತೆಯಾಗಿದ್ದು ಎಷ್ಟೋ ಸಂದರ್ಭಗಳಲ್ಲಿ ರಾತ್ರಿ ೯ ಗಂಟೆ, ೧೦ ಗಂಟೆವರೆಗೂ ವಿದ್ಯುಚ್ಛಕ್ತಿ ಸರಬರಾಜಾಗಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಅನೇಕ ಕಡೆಗಳಲ್ಲಿ ಅನಿರೀಕ್ಷಿತವಾಗಿ ಕೆಲವು ದಿವಸಗಳು ಮಾತ್ರ ಈರೀತಿ ಅಡಚಣೆಯುಂಟಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ವಿಚಾರ ನನ್ನ ಗಮನಕ್ಕೆ ಬಂದಕೂಡಲೇ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಒಂದು ವಾರದಲ್ಲಿ ಒಂದು ಸಾರಿ ಒಂದು ಗಂಟೆಗಿಂತ ಹೆಚ್ಚಿಗೆ ಅಡಚಣೆಯುಂಟಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಿದ್ದೇನೆ. ಆದರೆ ತಾವು ಹೇಳುವಂತೆ ಹೆಚ್ಚಿನ ತೊಂದರೆಯಾಗಿದೆ ಎಂಬ ದೂರು ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಅಂಥ ಹೆಚ್ಚಿನ ತೊಂದರೆಯಾಗುತ್ತಿರುವ ಪ್ರಕರಣಗಳೇನಾದರೂ ಇದ್ದಲ್ಲಿ ಅದನ್ನು ನನ್ನ ಗಮನಕ್ಕೆ ತಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡುತ್ತೇನೆ.

ಶ್ರೀ ಎ. ಬಿ. ಬೆಡಗಿ.—ಚಿಕ್ಕೋಡಿ, ನಿಪ್ಪಾಣಿ, ಸಾದಲಗ ಈ ಪ್ರದೇಶಗಳಲ್ಲಿ ಆದಷ್ಟೂ ತೊಂದರೆಯಾಗದಂತೆ ನೋಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಆದಷ್ಟು ಬೇಗ್ಗುವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ತಮಗೆ ಸಂದೇಹ ಬೇಡ.

Sites distributed to siteless people in Shikaripura Taluk, Shimoga District.

762 SRI K. YENKATAPPA (Shikaripura).—Will the Minister of State for Housing be pleased to state :—

(a) the number of sites distributed to the siteless persons in Shikaripura Taluk, Shimoga district ;

(b) whether the possession of the sites have been handed over to such of the persons to whom the said sites have been allotted ;

(c) if so, the names of such villages (details may be furnished) ?

SRI P. F. RODRIGUES (Minister of State for Housing).—

(a) 6652.

(b) Yes.

(c) The list containing names of villages and the number of ites distributed is placed on the Table of the House. **

ಶ್ರೀ ಕೆ. ಯಂಕಟಪ್ಪ.—ಶಿವಮೊಗ್ಗಾ ಜಿಲ್ಲಾ ಶಿಕಾರಿಪುರ ತಾಲ್ಲೂಕಿನಲ್ಲಿ ನಿವೇಶನರಹಿತರಿಗೆ ಎಷ್ಟು ನಿವೇಶನಗಳನ್ನು ಹಂಚಲಾಗಿದೆ ಎಂಬ ನನ್ನ ಪ್ರಶ್ನೆಗೆ ಉತ್ತರವಾಗಿ ''೬೬೫೨ ನಿವೇಶನಗಳನ್ನು'' ಹಂಚಿರುವುದಾಗಿ ತಾವು ಹೇಳಿದ್ದೀರಿ. ಇದರಲ್ಲಿ ಸಮರ್ಪಕವಾಗಿ ಎಲ್ಲಾ ಕೆಲಸಗಳೂ ಆಗಿ ಹಂಚಿರುವಂಥ ನಿವೇಶನಗಳೆಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಈಗಾಗಲೇ ನಾನು ತಮಗೆ ಕೊಟ್ಟಿರುವ ಉತ್ತರದ ಪ್ರಕಾರ ೬೬೫೨ ನಿವೇಶನಗಳನ್ನು ಹಂಚಿದ್ದೇವೆ. ಇನ್ನೂ ೨೫೦೦ ಜನರಿಗೆ ನಿವೇಶನಗಳನ್ನು ಹಂಚಲಿದ್ದೇವೆ

ಶ್ರೀ ಕೆ. ಯಂಕಟಪ್ಪ.—೬೬೫೨ ನಿವೇಶನಗಳನ್ನೂ ಸರಿಯಾಗಿ ಫಾರ್ಮೇಷನ್ ಮಾಡದೆ ಸಮರ್ಪಕವಾದ ರೀತಿಯಲ್ಲಿಲ್ಲದಿದ್ದರೆ, ಹಳ್ಳದಿಣ್ಣೆಗಳಿದ್ದರೆ, ಪ್ರತಿಯೊಂದು ಕೆಲಸವನ್ನೂ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಮಾಡಿ ಹಳ್ಳದಿಣ್ಣೆಗಳನ್ನು ಮುಚ್ಚಿ ಹಂಚಿಕೆ ಮಾಡಿದ್ದೀರಾ ? ಹಾಗೆ ಮಾಡಿಲ್ಲದಿದ್ದರೆ ಮಾಡಿಸಿಕೊಡುತ್ತೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಇದುವರೆಗೆ ಆ ಪ್ರದೇಶದಲ್ಲಿ ಎಷ್ಟು ಜನರಿಗೆ ಸೈಟುಗಳನ್ನು ಹಂಚಿದ್ದೀರಿ ಎಂದು ತಾವು ಕೇಳಿರುವ ಪ್ರಶ್ನೆಗೆ ಸೂಕ್ತ ಉತ್ತರವನ್ನು ನಾನು ಓದಿಸಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿ ತಮಗೆ ಬೇಕಾಗಿದ್ದರೆ ದಯವಿಟ್ಟು ಇನ್ನೊಂದು ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಓದಿಸುತ್ತೇನೆ.

ಶ್ರೀ ಕೆ. ಯಂಕಟಪ್ಪ.—ಇನ್ನೂ ೨೫೦೦ ನಿವೇಶನಗಳನ್ನು ಹಂಚಬೇಕೆಂದಿದ್ದೇವೆ ಎಂದು ತಾವು ಹೇಳಿದಿರಿ, ಆದರೆ ಮೇಲ್ಕಟ್ಟದ ಹಾಗೂ ಕೆಳಮಟ್ಟದ ಅಧಿಕಾರಿಗಳಿಂದ ಈ ಕೆಲಸ ತಡವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಈಗ ನಾನು ಮೊದಲೇ ಹೇಳಿದಂತೆ ೨೫೦೦ ನಿವೇಶನಗಳನ್ನು ಹಂಚುವ ಕೆಲಸ ಭರದಿಂದ ಸಾಗುತ್ತಿದೆ. ಇದಕ್ಕಾಗಿ ಜಮೀನನ್ನು ಸ್ವಾಧೀನ ಮಾಡಿಕೊಳ್ಳುತ್ತಿದ್ದೇನೆ. ಆದಷ್ಟು ಬೇಗ ಈ ಸೈಟುಗಳನ್ನೂ ಹಂಚುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಅಕ್ವಿಜಿಷನ್ ಆಗದೆ ಸೈಟುಗಳನ್ನು ಹಂಚುತ್ತಿರುವ ವಿಷಯ ತಮಗೆ ತಿಳಿದಿದೆಯೆ ? ಹಾಗೆ ಹಂಚಿದ್ದರೆ ಎಷ್ಟು ಸೈಟುಗಳನ್ನು ಹಂಚಿದ್ದೀರಿ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಬೇರೆ ನೋಟೀಸ್ ಇಲ್ಲದೆ ನಾನು ಏನನ್ನೂ ಹೇಳಂವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ನೀಡುತ್ತಿರುವ ಉತ್ತರ ತುಂಬಾ ಅಸಮರ್ಪಕವಾಗಿರುವುದರಿಂದ ಈ ಬಗ್ಗೆ ಅವರು ಪೂರ್ಣ ವಿವರಗಳನ್ನೂ ತಿಳಿದುಕೊಂಡು ಹೇಳುವವರೆಗೂ ಈ ಪ್ರಶ್ನೆಯನ್ನು ತಡೆಹಿಡಿಯಬೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇನ್ನೊಮ್ಮೆ ಸರಿಯಾದ ಪ್ರಶ್ನೆಯನ್ನು ಕೇಳಿ ನೋಡಿ, ಆಗ ಅವರು ಸರಿಯಾದ ಉತ್ತರವನ್ನು ಕೊಡಬಹುದು.

ಶ್ರೀ ಕೆ. ಯಂಕಟಪ್ಪ.—ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ? ಆ ಊರುಗಳ ಹೆಸರುಗಳನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ಪ್ರತ್ಯೇಕ ಪ್ರಶ್ನೆಯನ್ನು ಕೇಳಬೇಕೆಂದು ಹೇಳುತ್ತಿರುವುದರಿಂದ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

** Copy placed in the Karnataka Legislature Library *vide* No. 24 dated 8-5-1979.

ಶ್ರೀ ಕೆ. ಯಂಕಟಪ್ಪ.—ಇನ್ನೂ ೨೫೦೦ ನಿವೇಶನಗಳನ್ನು ಹಂಚುವ ಕೆಲಸ ಭರದಿಂದ ಸಾಗುತ್ತಿದೆ ಯೆಂದು ಆಗಲೇ ಹೇಳಿದಿರಿ. ಅಂದಮೇಲೆ ತಮಗೆ ಎಲ್ಲಾ ವಿವರಗಳೂ ಸ್ಪಷ್ಟವಾಗಿ ಗೊತ್ತಿರಬೇಕಲ್ಲವೆ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ತಾವು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ, ಉತ್ತರ ಕೊಡುತ್ತೇನೆ.

Sites distributed among siteless, harijans and other weaker sections in Arkalgud Taluk.

781 SRI K. B. MALLAPPA (Arakalgud).—Will the Minister of State for Housing be pleased to state :—

(a) the number of house-sites distributed among the siteless and harijans and other weaker sections in Arkalgud Taluk ;

(b) whether houses and sheds have been constructed on these sites; if so how many ;

(c) whether it has come to the notice of the Government that a owner of the land in Mallapura Ramanathpur Hobli has obstructed to construct houses and sheds inthe sites allotted ;

(d) if so, the action proposed to be taken against him?

SRI. P. F. RODRIGUES (Minister of State for Housing).—

(a) 3,834.

(b) Yes. (i) Houses ... 585

(ii) Huts ... 193

778

(c) Yes.

(d) the obstructions have been removed and the boundary stones refixed. The sites are restored to the allottees.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಆರಕಲಗೂಡು ತಾಲ್ಲೂಕಿನಲ್ಲಿರುವ ನಿವೇಶನ ರಹಿತ ಹರಿಜನ ಹಾಗೂ ಇತರೆ ದುರ್ಬಲವರ್ಗದವರಿಗೆ ಹಂಚಲಾದ ಗೃಹಗಳ ನಿವೇಶನಗಳ ಸಂಖ್ಯೆ ಎಷ್ಟು ಎಂದು ಕೇಳಿರುವ ನನ್ನ ಪ್ರಶ್ನೆಗೆ ಉತ್ತರವಾಗಿ ೩೮೩೪ ನಿವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ನಿವೇಶನ ಇಲ್ಲದಿರುವವರು ಎಷ್ಟುಮಂದಿಗೆ ಕೊಟ್ಟಿದ್ದೀರಿ ? ಮತ್ತು ದುರ್ಬಲವರ್ಗದವರಿಗೆ ಎಷ್ಟು ಮಂದಿಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಪಿ. ಎಫ್ ರೋಡ್ರಿಗ್ಸ್.—೩೮೩೪ ನಿವೇಶನಗಳ ಪೈಕಿ ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ೧೦೨೯, ಪೆಡ್ಯೂಲ್ಡ್ ಟ್ರೈಬ್ಸ್‌ಗೆ ೪೧ ಹಾಗೂ ದುರ್ಬಲ ವರ್ಗದವರಿಗೆ ೨೬೬೪ ನಿವೇಶನಗಳನ್ನು ಕೊಟ್ಟಿದ್ದೇವೆ,

ಶ್ರೀ ಕೆ. ಬಿ. ಮಲ್ಲಪ್ಪ.—ಕೆಲವು ಊರುಗಳಲ್ಲಿ ಜಮೀನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೀರಿ, ಆದರೆ ಫಾರ್ಮೇಷನ್ ಮಾಡಿಲ್ಲ. ಕೆಲವು ಊರುಗಳಲ್ಲಿ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದುದು ಇದೆ. ಆದರಿಂದ ಈ ಊರುಗಳು ಯಾವುವು ಎಂದು ತಿಳಿಸುತ್ತೀರಾ ?

ಶ್ರೀ ಪಿ. ಎಫ್. ರೋಡ್ರಿಗ್ಸ್.—ಯಾವ ಯಾವ ಊರುಗಳು ಎಂದು ತಾವು ಕೇಳಿದರೆ, ಆ ವಿವರ ನನ್ನ ಬಳಿ ಇಲ್ಲ, ತಾವು ಇನ್ನೊಂದು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.